# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 978 (1076)
2) ಸದಸ್ಯರ ಹೆಸರು : ಡಾ: ತಳವಾರ್ ಸಾಬಣ್ಣ
(ನಾಮನಿರ್ದೇಶನ ಹೊಂದಿದವರು)
3) ಉತ್ತರಿಸುವ ದಿನಾಂಕ : 25-07-2024
4) ಉತ್ತರಿಸುವವರು : ಮುಖ್ಯಮಂತ್ರಿಗಳು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕಲಬುರಗಿ ನಗರದಲ್ಲಿ ಪ್ರಾರಂಭಿಸಿದ ರಾಜ್ಯ ಮಾಹಿತಿ ಆಯೋಗದ ಪೀಠಕ್ಕೆ ಒದಗಿಸಿದ ಮೂಲಭೂತ ಸೌಕರ್ಯಗಳು ಮತ್ತು ಸಿಬ್ಬಂದಿ ವಿವರ ನೀಡುವುದು; | • ಕಲಬುರಗಿ ಪೀಠವನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ:ಪಿಡಿ/75/ಯೋಪರ/2018, ದಿನಾಂಕ: 10-01-2019 ರಲ್ಲಿ ಕಲಬುರಗಿ ನಗರಕ್ಕೆ ಸ್ಥಳಾಂತರಿಸಿ ಆದೇಶ ಹೊರಡಿಸಲಾಗಿದೆ. ಅದರಂತೆ ಕಲಬುರಗಿ ಪೀಠಕ್ಕೆ ದಿನಾಂಕ:18-04-2022 ರಂದು ಶ್ರೀ ರವೀಂದ್ರನಾಥ ಗುರುನಾಥ ಢಾಕಪ್ಪ ರವರನ್ನು ರಾಜ್ಯ ಮಾಹಿತಿ ಆಯುಕ್ತರಾಗಿ ನೇಮಿಸಿ ಆದೇಶಿಸಲಾಗಿದೆ.<br>• ದಿನಾಂಕ: 01-01-2024 ರಿಂದ ಕಲಬುರಗಿ ನಗರದ ಮಹಲ್-ಎ-ಶಾಹಿ ಗೆಸ್ಟ್ ಹೌಸ್ ಕಟ್ಟಡದಲ್ಲಿ ಕಲಬುರಗಿ ಪೀಠ ಕಾರ್ಯನಿರ್ವಹಿಸುತ್ತಿದ್ದು, ಸದರಿ ಪೀಠದ ದೈನಂದಿನ ಕಾರ್ಯಚಟುವಟಿಕೆಗಳಿಗೆ ಅಗತ್ಯ ಈ ಕೆಳಕಂಡ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆ. |

| ಕ್ರ.ಸಂ. | ಒದಗಿಸಲಾದ ಮೂಲಭೂತ ಸೌಲಭ್ಯಗಳ ವಿವರ | ಸಂಖ್ಯೆ |
|---|---|---|
| 1 | ಕಟ್ಟಡ ಹಾಗೂ ಅಗತ್ಯ ಪೀಠೋಪಕರಣ | ಲೋಕೋಪಯೋಗಿ ಇಲಾಖೆ, ಕಲಬುರಗಿ ವತಿಯಿಂದ ಕ್ರಮ ಸಂಖ್ಯೆ: 01 ರಿಂದ 03ರ ವರೆಗಿನ ಸೌಲಭ್ಯಗಳನ್ನು ಒದಗಿಸಲಾಗಿದೆ. |
| 2 | ವಿದ್ಯುತ್ ಸಂಪರ್ಕ | |
| 3 | ಕುಡಿಯುವ ನೀರು | |
| 4 | ಗಣಕಯಂತ್ರ | 06 |
| 5 | ಪ್ರಿಂಟರ್ | 02 |
| 6 | Photocopier ಯಂತ್ರ | 01 |
| 7 | ದೂರವಾಣಿ ಸಂಪರ್ಕ | 01 |
| 8 | KSWAN-ಇಂಟರ್ ನೆಟ್ ಸಂಪರ್ಕ | ಒದಗಿಸಲಾಗಿದೆ |
| 9 | Webex ಸೇವೆ | ಕಲಬುರಗಿ ಪೀಠಕ್ಕೆ ಸಂಬಂಧಿಸಿದಂತೆ ಮಾಹಿತಿ ಹಕ್ಕು ಅಧಿನಿಯಮ,2005 ಸೆಕ್ಷನ್ 19(3)ರಡಿ ಮೇಲ್ಮನವಿ ಹಾಗೂ ಸೆಕ್ಷನ್ 18(1)ರಡಿ ದೂರುಗಳಿಗೆ ಸಂಬಂಧಿಸಿದ ಪ್ರಕರಣಗಳ ವಿಚಾರಣೆಯನ್ನು ಆನ್ ಲೈನ್ ಮುಖೇನ ಸಹ ಕೈಗೊಳ್ಳಲು Webex ಸೇವೆಯನ್ನು ಕಲ್ಪಿಸಲಾಗಿದೆ. |

- ಕಲಬುರಗಿ ಪೀಠದ ನಿರ್ವಹಣೆಗೆ ವಿವಿಧ ವೃಂದದ ಹುದ್ದೆಗಳನ್ನು ಸರ್ಕಾರದಿಂದ ಮಂಜೂರು ಮಾಡಿದ್ದು, ಕಾರ್ಯನಿರ್ವಹಿಸುತ್ತಿರುವ ಹಾಗೂ ಖಾಲಿ ಹುದ್ದೆ ವಿವರ ಈ ಕೆಳಕಂಡಂತೆ ವಿವರಿಸಿದೆ.

**ಸರ್ಕಾರದಿಂದ/ಇತರೆ ಇಲಾಖೆಗಳಿಂದ ನಿಯೋಜಿಸಬೇಕಾದ ಹುದ್ದೆಗಳು**

| ಕ್ರಮ ಸಂಖ್ಯೆ | ಕಲಬುರಗಿ ಪೀಠಕ್ಕೆ ಸೃಜನೆ ಮಾಡಲಾದ ಹುದ್ದೆಗಳು | ಎ/ಬಿ/ಸಿ/ಡಿ ವೃಂದ | ಮಂಜೂರಾದ ಹುದ್ದೆಗಳ ಸಂಖ್ಯೆ | ಭರ್ತಿ | ಖಾಲಿ | ಷರಾ |
|---|---|---|---|---|---|---|
| 1 | 2 | 3 | 4 | 5 | 6 | 7 |
| 1 | ಶಾಖಾಧಿಕಾರಿ | ಬಿ | 01 | - | 01 | ನಿಯೋಜನೆ ಹುದ್ದೆ |
| 2 | ಪ್ರ.ದ.ಸ. | ಸಿ | 01 | - | 01 | ನಿಯೋಜನೆ ಹುದ್ದೆ |
| **ಹೊರಗುತ್ತಿಗೆ ಆಧಾರದ ಮೇಲೆ ಸೇವೆಯನ್ನು ಪಡೆದ ಹುದ್ದೆಗಳು** | | | | | | |
| 3 | ರಾಜ್ಯ ಮಾಹಿತಿ ಆಯುಕ್ತರ ಆಪ್ತ ಸಹಾಯಕರು/ ಶೀಘ್ರಲಿಪಿಗಾರರು | ಸಿ | 01 | 01 | - | ಭರ್ತಿಯಾಗಿದೆ |
| 4 | ತೀರ್ಪುಬರಹಗಾರರು | ಸಿ | 01 | 01 | - | |
| 5 | ಸಹಾಯಕರು | ಸಿ | 01 | 01 | - | |
| 6 | ದತ್ತ ನಮೂದಕರು/ ಬೆರಳಚ್ಚುಗಾರರು | ಸಿ | 01 | 01 | - | |
| 7 | ವಾಹನ ಚಾಲಕರು | ಸಿ | 01 | 01 | - | |
| 8 | ಗ್ರೂಪ್-ಡಿ | ಸಿ | 01 | 01 | - | |

* ಮೇಲೆ ತಿಳಿಸಿರುವ ಹೊರಗುತ್ತಿಗೆ ಆಧಾರದ ಸಿಬ್ಬಂದಿಗಳ ಹೊರತಾಗಿ ಕಲಬರುಗಿ ಪೀಠಕ್ಕೆ ಸಂಬಂಧಿಸಿದ ಪ್ರಕರಣಗಳ ಆನ್ ಲೈನ್ ಮೂಲಕ ವಿಚಾರಣೆಗೆ ಸಂಬಂಧಿಸಿದಂತೆ ತೀರ್ಪು ಗಳನ್ನು ಸಿದ್ಧಪಡಿಸಲು ಒಬ್ಬರು ದತ್ತನಮೂದಕರನ್ನು ಕರ್ನಾಟಕ ಮಾಹಿತಿ

| | | |
|---|---|---|
| | | ಆಯೋಗದ ಬೆಂಗಳೂರು ಕಛೇರಿಯಲ್ಲಿ ಒದಗಿಸಲಾಗಿದೆ.<br><br>• ನಿಯೋಜನೆಗೆ ಮೀಸಲಿರುವ ಶಾಖಾಧಿಕಾರಿ ಹಾಗೂ ಪ್ರ.ದ.ಸ. ಹುದ್ದೆಗಳನ್ನು ನಿಯೋಜನೆ ಮೂಲಕ ಭರ್ತಿ ಮಾಡಲು ಸರ್ಕಾರಕ್ಕೆ ಪತ್ರ ವ್ಯವಹರಿಸಲಾಗಿದೆ. ಈ ಪೈಕಿ ಸರ್ಕಾರದಿಂದ ಪ್ರ.ದ.ಸ. ನಿಯೋಜನೆಗೆ ಸ್ವೀಕೃತ ಪ್ರಸ್ತಾವನೆಗೆ ಸಹಮತಿ ನೀಡಲಾಗಿದೆ. ಉಳಿದ ಹುದ್ದೆಗಳ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಬಳಸಿಕೊಳ್ಳಲಾಗುತ್ತಿದೆ. |
| (ಆ) | ಕಲಬುರಗಿ ಮಾಹಿತಿ ಹಕ್ಕು ಆಯೋಗದ ಪೀಠಕ್ಕೆ ನೇಮಿಸಲಾದ ಆಯುಕ್ತರು ಬೆಂಗಳೂರಿನಲ್ಲಿ ಕುಳಿತು ಆಡಳಿತ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು; | ಕಲಬುರಗಿ ಪೀಠವನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ:ಪಿಡಿ/75/ಯೋಪರ/ 2018, ದಿನಾಂಕ: 10-01-2019 ರಲ್ಲಿ ಕಲಬುರಗಿ ನಗರಕ್ಕೆ ಸ್ಥಳಾಂತರಿಸಿ ಆದೇಶ ಹೊರಡಿಸಲಾಗಿದೆ. ಪೀಠಕ್ಕೆ ಅವಶ್ಯವಿರುವ ಕಟ್ಟಡದ ವ್ಯವಸ್ಥೆಯನ್ನು ಮುಖ್ಯ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಕಲಬುರಗಿ ರವರು ಕಾರ್ಯನಿರ್ವಹಿಸುತ್ತಿದ್ದ ಕಟ್ಟಡದಲ್ಲಿ ಸೌಲಭ್ಯ ಕಲ್ಪಿಸಲಾಗಿತ್ತು.<br><br>ಪೀಠ ಕಾರ್ಯನಿರ್ವಹಿಸಲು ಮಂಜೂರಾದ ಕಟ್ಟಡದಲ್ಲಿ ಇದ್ದ ಕೆಲವು ಸಮಸ್ಯೆಗಳನ್ನು ಸರಿಪಡಿಸಲು ಕೋರಿದ್ದ ಆಯುಕ್ತರು ಕಲಬುರಗಿ ನಗರಕ್ಕೆ ತೆರಳದೆ ದಿನಾಂಕ: 26.05.2022 ರಿಂದ ದಿನಾಂಕ:31.12.2023ರವರೆಗೆ ಕರ್ನಾಟಕ ಮಾಹಿತಿ ಆಯೋಗದ, ಮಾಹಿತಿ ಸೌಧದಲ್ಲಿನ ಕಛೇರಿಯಿಂದಲೇ ಪ್ರಕರಣಗಳ ವಿಚಾರಣೆಯನ್ನು ಕೈಗೊಂಡಿರುತ್ತಾರೆ. ಈ ಮಧ್ಯೆ ಕಲಬುರಗಿ ಪೀಠಕ್ಕೆ ಕಲಬುರಗಿ ನಗರದಲ್ಲಿ ಉಚ್ಚನ್ಯಾಯಾಲಯದ ಕಟ್ಟಡದಲ್ಲಿ ಸ್ಥಳಾವಕಾಶ ಕೋರಿ ದಿನಾಂಕ: 06-12-2023 ರಲ್ಲಿ ವ್ಯವಹರಿಸಲಾಗಿದ್ದು, ಉಚ್ಚನ್ಯಾಯಾಲಯವು ದಿನಾಂಕ: 11-1-2024 ರ ಪತ್ರ ಮುಖೇನ ನಿರಾಕರಿಸಿದೆ.<br><br>ನಂತರದಲ್ಲಿ ಲೋಕೋಪಯೋಗಿ ಇಲಾಖೆ ಮತ್ತು ಕಲಬುರಗಿ ಜಿಲ್ಲಾಡಳಿತದ ಸಹಕಾರದಿಂದ "ಮಹಲ್-ಎ-ಷಾಹಿ" ಅತಿಥಿ ಗೃಹ, ಸ್ಟೇಷನ್ ರಸ್ತೆ, ಕಲಬುರಗಿ ಇಲ್ಲಿ ಅವಶ್ಯವಿರುವ ಕಟ್ಟಡವನ್ನು ಕಲಬುರಗಿ ಪೀಠಕ್ಕೆ ಸರ್ಕಾರದಿಂದ ಅವಕಾಶ ಕಲ್ಪಿಸಲಾಗಿದೆ. ಅದರಂತೆ ಈ ಕಟ್ಟಡದಲ್ಲಿ ದಿನಾಂಕ 01-01-2024 ರಿಂದ ಕಲಬುರಗಿ ಪೀಠವು ಕಾರ್ಯನಿರ್ವಹಿಸುತ್ತಿದೆ.<br><br>ಈ ಮಧ್ಯೆ ದಿನಾಂಕ:06.05.2024 ರಿಂದ 10.06.2024ವರೆಗೆ ರಾಜ್ಯ ಮಾಹಿತಿ ಆಯುಕ್ತರು, ಕಲಬುರಗಿ ಪೀಠ ಇವರು ಬಾಕಿ ಉಳಿದಿದ್ದ ಮೇಲ್ಮನವಿ ಪ್ರಕರಣಗಳನ್ನು ಇತ್ಯರ್ಥಪಡಿಸುವ ಕಾರಣ, ಕರ್ನಾಟಕ ಮಾಹಿತಿ ಆಯೋಗ, ಮಾಹಿತಿ ಸೌಧ, ಬೆಂಗಳೂರು ಇಲ್ಲಿನ ಕಛೇರಿಯಿಂದ ಕಾರ್ಯನಿರ್ವಹಿಸಿರುತ್ತಾರೆ. ಈ ಬಗ್ಗೆ ಪತ್ರಿಕಾ ವರದಿ ಪ್ರಕಟಗೊಂಡ ಹಿನ್ನೆಲೆಯಲ್ಲಿ ರಾಜ್ಯ ಮುಖ್ಯ ಮಾಹಿತಿ ಆಯುಕ್ತರು ಸೂಕ್ತ ಆದೇಶ ಹೊರಡಿಸಿದ್ದು, ಪ್ರಸ್ತುತ ಆಯುಕ್ತರು ಕಲಬುರಗಿ ನಗರದ ಪೀಠದಿಂದಲೇ ಕಾರ್ಯ ನಿರ್ವಹಿಸುತ್ತಿದ್ದಾರೆ. |
| (ಇ) | ಕಲಬುರಗಿಯ ಪೀಠಕ್ಕೆ ಪೂರ್ಣ ಪ್ರಮಾಣದ | ಕಲ್ಯಾಣ ಕರ್ನಾಟಕ ಸರ್ವತೋಮುಖ ಅಭಿವೃದ್ಧಿಯನ್ನು ತೀವ್ರಗೊಳಿಸಲು ಹಾಗೂ ಆ ಭಾಗದ ಸಾರ್ವಜನಿಕರಿಗೆ ರಾಜ್ಯದ ಆಡಳಿತವು |

| | | |
|---|---|---|
| | ಆಯುಕ್ತರನ್ನು ನೇಮಿಸಿ ಕಲ್ಯಾಣ ಕರ್ನಾಟಕ ಭಾಗದ ಜನರಿಗೆ ಅನುಕೂಲ ಆಗುವಂತೆ ಸರ್ಕಾರ ಕ್ರಮ ವಹಿಸಬಹುದೇ; | ಹತ್ತಿರವಾಗಲು ಕರ್ನಾಟಕ ಸರ್ಕಾರವು ಬೆಂಗಳೂರಿನಲ್ಲಿರುವ ಕರ್ನಾಟಕ ರಾಜ್ಯ ಮಾಹಿತಿ ಆಯೋಗದ ಪೀಠಗಳಲ್ಲಿ 01 ಪೀಠವನ್ನು ಪೂರ್ಣ ಪ್ರಮಾಣದಲ್ಲಿ ಕಲಬುರಗಿ ನಗರಕ್ಕೆ ಸ್ಥಳಾಂತರಿಸಲಾಗಿರುತ್ತದೆ ಮತ್ತು ಶ್ರೀ ರವೀಂದ್ರುನಾಥ ಗುರುನಾಥ ಢಾಕಪ್ಪ ರವರನ್ನು ರಾಜ್ಯ ಮಾಹಿತಿ ಆಯುಕ್ತರನ್ನಾಗಿ ನೇಮಿಸಿ ಆದೇಶಿಸಲಾಗಿದೆ. |
| (ಈ) | ಕಲಬುರಗಿ ಪೀಠದಲ್ಲಿನ ಅಧಿಕಾರಿಗಳ/ಸಿಬ್ಬಂದಿಗಳ ಗೊಂದಲ ಮತ್ತು ಒಳಜಗಳ ಕಾರಣದಿಂದ ಸಂವಿಧಾನದತ್ತ ಮಾಹಿತಿ ಹಕ್ಕನ್ನು ಪಡೆಯಲು ಈ ಭಾಗದ ಜನರಿಗೆ ಅನುಕೂಲವಾಗುವಂತೆ ಕೈಗೊಳ್ಳುವ ಕ್ರಮಗಳೇನು? | ಪ್ರಸ್ತುತ ಅಂತಹ ಸಮಸ್ಯೆಗಳಿರುವುದಿಲ್ಲ. ಉಳಿದಂತೆ ಕ್ರಮ ಸಂಖ್ಯೆ: ಇ ರಲ್ಲಿನ ಉತ್ತರ ಅನ್ವಯಿಸುತ್ತದೆ. |

ಸಂಖ್ಯೆ: ಸಿಆಸುಇ(ಆಸು) 205 ಆರ್ ಟಿ ಐ 2024

(ಸಿದ್ದರಾಮಯ್ಯ)
ಮುಖ್ಯಮಂತ್ರಿ